ದಿನಾಂಕಃ **06.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಆರ್.ಆರ್. ವಕೀಲರಿಂದಃ

ನಾನು 4 ನೇ ತರಗತಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನಾನು ಯಾವ ವರ್ಷದಲ್ಲಿ 4 ನೇ ತರಗತಿ ವಿಧ್ಯಾಭ್ಯಾಸ ಮಾಡಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ನಮ್ಮ ಗ್ರಾಮದಿಂದ ದಾವಾ ಸ್ವತ್ತುಗಳು ಸುಮಾರು 1 1/5-2 ಕಿ.ಮೀ.ದೂರದಲ್ಲಿ ಇರುತ್ತದೆ. ಆರ್.ಗೊಲ್ಲರಹಟ್ಟಿ ಗ್ರಾಮದಲ್ಲಿ ಸುಮಾರು 80-100 ಮನೆಗಳು ಇರುತ್ತವೆ. ಆರ್.ಗೊಲ್ಲರಹಟ್ಟಿ ಗ್ರಾಮದಲ್ಲಿರುವ 80-100 ಮನೆಗಳಿಗೆ ಸಂಬಂಧಿಸಿದ ವೈಯಕ್ತಿಕ ವಿಚಾರ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಚಿತ್ತಮ್ಮ ಈರಣ್ಣರವರ ವಿರುದ್ಧ ಮಾತ್ರ ಹೂಡಿರುತ್ತಾರೆ

2. ಆರ್.ಗೊಲ್ಲರಹಟ್ಟಿ ಗ್ರಾಮದ ಜೂಲದಾಸಪ್ಪರವರ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈರಣ್ಣನಿಗೆ ಒಬ್ಬನೇ ಮಗ ಉಗ್ರಪ್ಪ ಇರುತ್ತಾನೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಉಗ್ರಪ್ಪ ಮತ್ತು ಬಾಲಮ್ಮ ಎಂಬ ಮಗಳ ಇರುತ್ತಾರೆ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ಉಗ್ರಪ್ಪನನ್ನು ನಾನು ನೋಡಿರುತ್ತೇನೆ. 1 ನೇ ಪ್ರತಿವಾದಿ ರೋಗಿಷ್ಟನಾಗಿದ್ದು ಯಾವುದೇ ಕೆಲಸ ಮಾಡಲಾಗುವುದಿಲ್ಲ ಎಂದರೆ ಸರಿ.

3. ಈ ದಾವೆಯನ್ನು ಆರ್.ಗೊಲ್ಲರಹಟ್ಟಿ ಗ್ರಾಮದ ಸರ್ವೆ.ನಂಬರ್.45/6 ರಲ್ಲಿನ 1 ಎಕರೆ 30 ಗುಂಟೆ ಮತ್ತು ಸರ್ವೆ.ನಂಬರ್.45/10 ರಲ್ಲಿನ 30 ಗುಂಟೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. ದಾವಾ ಸ್ವತ್ತುಗಳು ಆರ್.ಗೊಲ್ಲರಹಟ್ಟಿ ಗ್ರಾಮದ ವ್ಯಾಪ್ತಿಯಲ್ಲಿ ಇರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತುಗಳ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಜಮೀನು

ಇರುವುದಿಲ್ಲ. ದಾವಾ ಸ್ವತ್ತುಗಳು ನಮ್ಮ ಗ್ರಾಮದಲ್ಲಿ ಇರುವುದಿಲ್ಲ ಮತ್ತು ದಾವಾ ಸ್ವತ್ತುಗಳ ಅಕ್ಕ ಪಕ್ಕದಲ್ಲಿ ನನಗೆ ಸೇರಿದ ಜಮೀನುಗಳು ಇಲ್ಲದೇ ಇರುವುದರಿಂದ ದಾವಾ ಸ್ವತ್ತುಗಳ ಕಡೆ ನಾನು ಹೋಗುವಂತಹ ಅವಶ್ಯಕತೆ ಇರುವುದಿಲ್ಲ ಎಂದು ಸೂಚಿಸಿದಕ್ಕೆ ಸಾಕ್ಷಿಯು ಕೂಲಿ ಕೆಲಸಕ್ಕೆ ಹೋದಾಗ ನೋಡಿರುತ್ತೇನೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತುಗಳಲ್ಲಿ ಯಾರು ಸಾಗುವಳಿ ಮಾಡುತ್ತಿರುತ್ತಾರೆ ಎಂದು ನಿಮಗೆ ಗೊತ್ತಿರುವುದಿಲ್ಲ ಎಂದು ಸೂಚಿಸಿದ್ದಕ್ಕೆ ಸಾಕ್ಷಿಯು ಮುಂಗಾರಿನಲ್ಲಿ ಚಿತ್ತಮ್ಮ ಸಾಗುವಳಿ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಮುಂಗಾರಿನಲ್ಲಿ ಚಿತ್ತಮ್ಮ ದಾವಾ ಸ್ವತ್ತುಗಳಲ್ಲಿ ತೊಗರಿ ಬೆಳೆ ಹಾಕಿದ್ದರು. ಎಷ್ಟು ತೊಗರಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ.

4. ದಾವಾ ಸ್ವತ್ತುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 1 ನೇ ಸ್ವತ್ತಿನಲ್ಲಿ ವಾದಿ ಮತ್ತು ವಾದಿಯ ತಾಯಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಓ.ಎಸ್.ನಂ.451/2012 ರಲ್ಲಿ ತೀರ್ಪು ಆಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಸ್ವತ್ತುಗಳಿಗೆ ಸಂಬಂಧಿಸಿದ ಪಹಣಿಗಳನ್ನು ನೋಡಿರುವುದಿಲ್ಲ. 2 ನೇ ಪ್ರತಿವಾದಿ ಎಷ್ಟು ವರ್ಷಗಳಿಂದ ಪುಲಮಾಚಿ ಗ್ರಾಮದಲ್ಲಿ ಮಗಳೊಂದಿಗೆ ವಾಸವಾಗಿದ್ದರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಪುಲಮಾಚಿ ಮತ್ತು ಗೊಲ್ಲರಹಟ್ಟಿ ಎರಡು ಕಡೆ ವಾಸವಾಗಿದ್ದರೂ ಎಂದು ಉತ್ತರಿಸುತ್ತಾರೆ. ಚಿತ್ತಮ್ಮ ಗೊಲ್ಲರಹಟ್ಟಿ ಗ್ರಾಮದಲ್ಲಿ ವಾಸವಾಗಿದ್ದರು.

5. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ಯಾವ ಗ್ರಾಮದಲ್ಲಿ ವಾಸವಾಗಿರುತ್ತಾರೋ ಅವರ ಎಲ್ಲಾ ದಾಖಲೆಗಳಲ್ಲಿ ಸದರಿ ಗ್ರಾಮದ ವಿಳಾಸ ನಮೂದಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳಲ್ಲಿ ಚಿತ್ತಮ್ಮ ಯಾವುದೇ ಸಮಯದಲ್ಲಿ ಸಾಗುವಳಿ ಮಾಡಿರುವುದಿಲ್ಲ ಎಂದು

ಸೂಚಿಸುವುದು ಸರಿಯಲ್ಲ.ಚಿತ್ತಮ್ಮ ಗೊಲ್ಲರಹಟ್ಟಿ ಗ್ರಾಮದಲ್ಲಿ ವಾಸವಾಗಿರಲ್ಲಿ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ಕೆಲವು ದಿನ ಇರುತ್ತಿದ್ದರು ಕೆಲವು ದಿನ ಕಾಟಗಾನಹಟ್ಟಿಯಿಂದ ಬರುತ್ತಿದ್ದರು ಎಂದು ಉತ್ತರಿಸುತ್ತಾರೆ. ವಾದಿ ನಿಮ್ಮ ಸಂಬಂಧಿಕರು ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನನ್ನ ತಂಗಿ ಇದ್ದಂತೆ ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ